# ಪ್ರೀತಿ ಮತ್ತು ಅತ್ಯಾಚಾರದ ನಡುವೆ..

ಗಂಡು–ಹೆಣ್ಣಿನ ಸಮಾನತೆಯ ಕನಸು ಸಾಕಾರಗೊಳ್ಳುತ್ತಿರುವ ಈ ದಿನಗಳಲ್ಲಿ ಪರಸ್ಪರರ ಆಕರ್ಷಣೆಗೆ ಸುಲಭ ದಾರಿಗಳು ಸೃಷ್ಟಿಯಾಗಿವೆ. ಈ ಸ್ವಾತಂತ್ರ್ಯದ ದುರ್ಲಾಭ ಪಡೆಯುವಲ್ಲಿ ಗಂಡು ಯಾವತ್ತೂ ಹಿಂದೆ ಬಿದ್ದಿಲ್ಲ.

ಅತ್ಯಾಚಾರ ಮತ್ತು ಹೆಣ್ಣಿನ ಘನತೆಗೆ ಧಕ್ಕೆ ತರುವ ಪ್ರಕರಣಗಳು ಇತ್ತೀಚೆಗೆ ದೊಡ್ಡ ಸಂಖ್ಯೆಯಲ್ಲಿ ವರದಿಯಾಗುತ್ತಿವೆ. ಪತ್ರಿಕೆಗಳಲ್ಲಿ ಅತ್ಯಾಚಾರದ ಸುದ್ದಿ ಇಲ್ಲದ ದಿನವೇ ಇಲ್ಲ ಎನ್ನಬಹುದು. ದೃಶ್ಯಮಾಧ್ಯಮಗಳಲ್ಲಿ  ಪ್ರತಿ ರಾತ್ರಿ ಬಿತ್ತರವಾಗುವ ಕ್ರೈಮ್ ವಿಶೇಷಗಳಲ್ಲಿ ಬಹುತೇಕ ಅತ್ಯಾಚಾರ ಪ್ರಕರಣಗಳೇ ವಿಜೃಂಭಿಸುತ್ತಿವೆ. ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ ಪ್ರಕಾರ ನಮ್ಮ ದೇಶದಲ್ಲಿ ಪ್ರತಿ 20 ನಿಮಿಷಕ್ಕೆ ಒಂದು ಅತ್ಯಾಚಾರದ ಪ್ರಕರಣ ದಾಖಲಾಗುತ್ತಿದೆ. ಅತ್ಯಾಚಾರ ಪ್ರಕರಣದ ದೂರು ದಾಖಲಾಗುವಲ್ಲಿ ಮಹಾನಗರಗಳ ಪೈಕಿ ಬೆಂಗಳೂರು ನಗರ ನಾಲ್ಕನೇ ಸ್ಥಾನದಲ್ಲಿದೆ. ದೆಹಲಿಯಲ್ಲಿ ಚಲಿಸುವ ಬಸ್‌ನಲ್ಲಿಯೇ ತರುಣಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರದ ಪ್ರಕರಣ ವರದಿಯಾದ ಬಳಿಕ ಕೇಂದ್ರ ಸರ್ಕಾರವೂ ಈ ನಿಟ್ಟಿನಲ್ಲಿ ಗಂಭೀರ ಗಮನ ಹರಿಸಿ, ಅತ್ಯಾಚಾರಿಗಳಲ್ಲಿ ಭಯ ಹುಟ್ಟಿಸಲೆಂದೇ ಕಠಿಣ ಕಾನೂನು ತಿದ್ದುಪಡಿಯನ್ನು ಮಾಡಿತು. ಸಂಸತ್ತಿನಲ್ಲಿ ಈ ತಿದ್ದುಪಡಿ ಮಸೂದೆ ಅಂಗೀಕಾರಗೊಂಡು ಕಾನೂನಾಗಿ ಈಗ  ವರ್ಷ ಹತ್ತಿರ ಬಂದರೂ ಅತ್ಯಾಚಾರದ ಸಂಖ್ಯೆಗಳಲ್ಲಿ ಇಳಿಕೆಯಾಗಿಲ್ಲ. ಇನ್ನಷ್ಟು ಪ್ರಕರಣಗಳು ವರದಿಯಾಗುತ್ತಲೇ ಇವೆ.

ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಒಟ್ಟು 4479 ಅತ್ಯಾಚಾರದ ದೂರುಗಳು ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ. ಇವುಗಳಲ್ಲಿ 315 ಪ್ರಕರಣಗಳಲ್ಲಿ ಮಾತ್ರ ಆರೋಪಿಗಳಿಗೆ ಶಿಕ್ಷೆಯಾಗಿದೆ. ಇದರ ಅರ್ಥ ಎರಡೂ ತರಹ ಇರಬಹುದು. ಒಂದೋ ಬಹುತೇಕ ಅತ್ಯಾಚಾರ ದೂರುಗಳಲ್ಲಿ ಹುರುಳಿಲ್ಲದೆ ಇರಬಹುದು. ಅಥವಾ ಇಂತಹ ಪ್ರಕರಣಗಳನ್ನು ಸರಿಯಾಗಿ ನಿಭಾಯಿಸಿ ಕಾನೂನು ಪರಿಹಾರವನ್ನು ಸಮರ್ಥವಾಗಿ ಒದಗಿಸುವಲ್ಲಿ ನಮ್ಮ ಪೊಲೀಸ್ ಮತ್ತು ನ್ಯಾಯಾಂಗ ವ್ಯವಸ್ಥೆ ವಿಫಲವಾಗಿರಬಹುದು.

ಇತ್ತೀಚೆಗೆ ದಾಖಲಾಗುತ್ತಿರುವ ಅತ್ಯಾಚಾರ ಪ್ರಕರಣಗಳ ತನಿಖೆಯ ಸಂದರ್ಭದಲ್ಲಿ, ಐಪಿಸಿ 376ನೇ ವಿಧಿಯ ದುರ್ಬಳಕೆ ನಡೆದ ಕೆಲವು ಪ್ರಕರಣಗಳೂ ಬೆಳಕಿಗೆ ಬಂದಿವೆ. ತನ್ನ ಜತೆ 'ಲಿವಿಂಗ್ ಇನ್' ಸಂಬಂಧ ಇಟ್ಟುಕೊಂಡು ಬಳಿಕ ಕೈಬಿಟ್ಟ ವ್ಯಕ್ತಿಯೊಬ್ಬನಿಂದ ಜೀವನಾಂಶ ಕೋರಿ ಮಹಿಳೆಯೊಬ್ಬಳು ಅತ್ಯಾಚಾರದ ಮೊಕದ್ದಮೆ ಹೂಡಿದ ಪ್ರಕರಣವೊಂದು ಕಳೆದ ವಾರ ಬೆಂಗಳೂರಿನ ಸೆಶನ್ಸ್ ಕೋರ್ಟ್‌ನಲ್ಲಿ ವಿಚಾರಣೆಗೆ ಬಂದಿತ್ತು. ತನಿಖೆಯ ವೇಳೆ, ಹಿಂದೆ  ಆಕೆ ಇದೇ ರೀತಿ ಇನ್ನೂ ಆರು ಜನರ ವಿರುದ್ಧ ಅತ್ಯಾಚಾರದ ಮೊಕದ್ದಮೆ ಹೂಡಿ ಬಳಿಕ ಕೋರ್ಟ್ ಹೊರಗಿನ ಇತ್ಯರ್ಥದಲ್ಲಿ ಪರಿಹಾರ ಪಡೆದದ್ದು ಬೆಳಕಿಗೆ ಬಂತು! ಹಿರಿಯ ವಕೀಲರ ಪ್ರಕಾರ, ಅತ್ಯಾಚಾರದ ದೂರು ದಾಖಲಾಗುವ ಶೇಕಡಾ 80ರಷ್ಟು ಪ್ರಕರಣಗಳಲ್ಲಿ ಲೈಂಗಿಕ ಸಂಪರ್ಕವು ಗಂಡು–ಹೆಣ್ಣಿನ ಪರಸ್ಪರ ಒಪ್ಪಿಗೆಯಿಂದಲೇ ಸಂಭವಿಸುತ್ತದೆ. ಗಂಡು– ಹೆಣ್ಣು ನಡುವಣ ಈ ಸ್ನೇಹ ಮದುವೆಯಾಗಿ ಪರಿವರ್ತನೆ ಆಗುವಲ್ಲಿ ಜಾತಿ, ಧರ್ಮ, ಅಂತಸ್ತು ಅಥವಾ ವೈಯಕ್ತಿಕ ಪ್ರತಿಷ್ಠೆಗಳು ಅಡ್ಡಿ ಬಂದು ಗಂಡು ದೂರವಾದ ಬಳಿಕವೇ ಬಹುತೇಕ ಅತ್ಯಾಚಾರದ ದೂರುಗಳು ದಾಖಲಾಗುತ್ತಿವೆ. ಪ್ರಸ್ತುತ ನ್ಯಾಯಾಲಯದಲ್ಲಿ ಸುದ್ದಿ ಮಾಡುತ್ತಿರುವ ಗಣ್ಯರಿಬ್ಬರ ವಿರುದ್ಧದ ಅತ್ಯಾಚಾರ ದೂರುಗಳಲ್ಲಿಯೂ ಕೂಡಾ ಈ ರೀತಿಯ ಅನುಮಾನಗಳನ್ನು ಮೂಡಿಸುವ ಸಂಗತಿಗಳಿವೆ.

ಕೆಳಹಂತದಲ್ಲಿ ಬಹುತೇಕ ಪೊಲೀಸರು ಅತ್ಯಾಚಾರಕ್ಕೆ ಒಳಗಾದ ಹೆಣ್ಣನ್ನು ಕಡೆಗಣ್ಣಿನಿಂದಲೇ ನೋಡುತ್ತಾರೆ. 'ತಪ್ಪು ಏನಿದ್ದರೂ ಹೆಣ್ಣಿನದ್ದೇ. ಈಕೆ ಸರಿ ಇದ್ದಿದ್ದರೆ ಗಂಡು ಖಂಡಿತಾ ಅತ್ಯಾಚಾರ ಮಾಡುತ್ತಿರಲಿಲ್ಲ' ಎನ್ನುವ ಮನೋಭಾವ ಪೊಲೀಸರಲ್ಲಿದೆ. ಅದು ನಮ್ಮ ಪುರುಷಪ್ರಧಾನ ಸಮಾಜದ ಪ್ರತಿಬಿಂಬವೂ ಹೌದು. ಈ ವಿಷಯದಲ್ಲಿ ಉನ್ನತ ಪೊಲೀಸ್ ಅಧಿಕಾರಿಗಳಷ್ಟು ಕೆಳಹಂತದ ಪೊಲೀಸರು ಸಂವೇದನಾಶೀಲರಾಗಿರುವುದಿಲ್ಲ. ಹೊಸ ತಿದ್ದುಪಡಿಯ ಕಟ್ಟುನಿಟ್ಟಿನ ಅನುಷ್ಠಾನದ ಪ್ರಕಾರ, ಮೊದಲು ಎಫ್‌ಐಆರ್ ಸಲ್ಲಿಸಿ ಆ ಬಳಿಕ ವಿಸ್ತೃತ ತನಿಖೆ ನಡೆಸುವ ವಿಧಾನದಿಂದಾಗಿಯೂ ಐಪಿಸಿ 376ನೇ ವಿಧಿ ತಪ್ಪುಬಳಕೆಯಾಗಿರುವ ಉದಾಹರಣೆಗಳಿವೆ.

ಒಂದಂತೂ ಸ್ಪಷ್ಟ. ಗಂಡು–ಹೆಣ್ಣಿನ ಸಮಾನತೆಯ ಕನಸು ಸಾಕಾರಗೊಳ್ಳುತ್ತಿರುವ ಈ ದಿನಗಳಲ್ಲಿ ಪರಸ್ಪರರ ಆಕರ್ಷಣೆಗೆ ಸುಲಭ ದಾರಿಗಳು ಸೃಷ್ಟಿಯಾಗಿವೆ. ಈ ಸ್ವಾತಂತ್ರ್ಯದ ದುರ್ಲಾಭ ಪಡೆಯುವಲ್ಲಿ ಗಂಡು ಯಾವತ್ತೂ ಹಿಂದೆ ಬಿದ್ದಿಲ್ಲ. ಅನುನಯದ ಮಾತುಗಳಿಂದ ದೇಹವನ್ನು ಅನುಭವಿಸಿ ಆ ಬಳಿಕ ಮದುವೆಯ ಜವಾಬ್ದಾರಿಯಿಂದ ಕಳಚಿಕೊಳ್ಳಬಯಸುವ ಗಂಡಸರು, ಹೆಣ್ಣಿನ ಪ್ರತೀಕಾರದ ಕ್ರಮವಾಗಿ ಐಪಿಸಿ 376ನೇ ವಿಧಿಯ ಅಡಕತ್ತರಿಗೆ ಸಿಕ್ಕಿಬೀಳುತ್ತಿದ್ದಾರೆ. ಪ್ರೀತಿ ಮತ್ತು ಲೈಂಗಿಕತೆ ಬಯಸುವ ನೈತಿಕ ಮೌಲ್ಯಗಳನ್ನು ಪರಸ್ಪರರು ನಿರ್ಲಕ್ಷಿಸುವುದೂ ಇದಕ್ಕೊಂದು ಕಾರಣ ಇರಬಹುದೆ?

**ಬಿ.ಎಂ.ಹನೀಫ್**



ಈಶ್ವರ್